
## ನದಿಯೊಂದು ನಿದ್ರಿಸಿದಾಗ



“ಮನುಷ್ಯನಿಗೆ ಇನ್ನೊಬ್ಬ ಮನುಷ್ಯನಲ್ಲಿ ನಂಬಿಕೆಯನ್ನು ತಂದುಕೊಡಬಲ್ಲ ಶಕ್ತಿ ಇರುವುದು, ವ್ಯಕ್ತಿಗತವಾಗಿ ವಿಶಿಷ್ಟವಾಗಿದ್ದು ಸಮುದಾಯದ ಒಳಗೆ ಕರಗಿ ಹೋಗಬಲ್ಲ ವ್ಯವಸ್ಥೆಯಲ್ಲಿ ಮಾತ್ರ ಎನ್ನುವ ಸರಳ ಸತ್ಯವನ್ನು ಉಸುರುವ ಈ ಕಾದಂಬರಿಯು ಕನ್ನಡ ಸಂವೇದನೆಗೆ ಹೊಸ ಆಯಾಮವನ್ನು ಸೇರಿಸುತ್ತದೆ ಎನ್ನುವ ನಂಬಿಕೆ ನನ್ನದು. ಕಾದಂಬರಿಯಲ್ಲಿ ವೀಲಿಯೆಯು ಕಾಣುವ ಕನಸು, ‘ಮಲಗಿದ ನದಿ’, ‘ಹೃದಯದ ಕಲ್ಲು’ ಎಲ್ಲವೂ ರೂಪಕ ಲೋಕದಲ್ಲೂ ನಿಜ, ವಾಸ್ತವದಲ್ಲಿಯೂ ನಿಜ ಅನ್ನುವಂತಹ ಲೋಕವನ್ನು ಈಸ್ಟರೀನ್ ಕೀರೆಯವರು ಸೃಷ್ಟಿಸಿದ್ದಾರೆ. ಕುವೆಂಪು, ಪೂರ್ಣಚಂದ್ರ ತೇಜಸ್ವಿಯವರ ಮುಖೇನ ಕನ್ನಡ ಸಾಹಿತ್ಯ ಲೋಕ ಕಂಡಿರುವ ಕಾಡಿಗಿಂತ ಭಿನ್ನ ಕಾಡೊಂದು ಈ ಕೃತಿಯಲ್ಲಿ ಅನಾವರಣಗೊಂಡಿರುವುದು ಮತ್ತು ಆ ಕಾಡೇ ಇಲ್ಲಿನ ಕಥನದ ವಿನ್ಯಾಸವನ್ನು ರೂಪಿಸಿರುವ ಬಗೆಯು ಕನ್ನಡ ಕಥನ ಪರಂಪರೆಯ ವಿನ್ಯಾಸವನ್ನು ಪ್ರೇರೇಪಿಸಲಿ ಎಂದು ಬಯಸುತ್ತೇನೆ”.

‘ನದಿಯೊಂದು ನಿದ್ರಿಸಿದಾಗ’ ಕಾದಂಬರಿಗೆ ಜ.ನಾ. ತೇಜಶ್ರೀ ಅವರು ಬರೆದಿರುವ ಮುನ್ನುಡಿಯ ಭಾಗವಿದು. ನಾಗಾಲ್ಯಾಂಡ್‌ನ ಈಸ್ಟರೀನ್ ಕೀರೆ ಅವರ ‘ವೆನ್ ದಿ ರಿವರ್ ಸ್ಲೀಪ್ಸ್’ ಕಾದಂಬರಿಯನ್ನು ರವಿ ಹಂಪಿ ‘ನದಿಯೊಂದು ನಿದ್ರಿಸಿದಾಗ’ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಓದಿಯೇ ಅನುಭವಿಸಬೇಕಾದ ಈ ಕಾದಂಬರಿಯ ಮಹತ್ವವನ್ನು ತೇಜಶ್ರೀ ಅವರ ಮಾತುಗಳು ಸೂಚಿಸುತ್ತಿವೆ.

**ಮೂಲ: ಈಸ್ಟರೀನ್ ಕೀರೆ; ಕನ್ನಡಕ್ಕೆ: ರವಿ ಹಂಪಿ; ಪು: 192; ಬೆ: ₹ 150; ಪ್ರ: ವೈಷ್ಣವಿ ಪ್ರಕಾಶನ; ಫೋನ್: 9620170027.**

---

## ದೇವರ ಹೊಲ



‘ಕರಿಜಾಲಿ ಮರ’ ಸಂಕಲನದ ಕಥೆಗಳ ಮೂಲಕ ಮಂಜಯ್ಯ ದೇವರಮನಿ ಸಹೃದಯರ ಗಮನಸೆಳೆದವರು. ‘ದೇವರ ಹೊಲ’ ಅವರ ಎರಡನೇ ಕಥಾಸಂಕಲನ. ಹಾವೇರಿ ಜಿಲ್ಲೆಯ ಸಂಗಾಪುರದ ಮಂಜಯ್ಯ ವೃತ್ತಿಯಿಂದ ಶಿಕ್ಷಕರು. ಅವರ ಪಾಲಿಗೆ ಸಮಾಜವೇ ಪಾಠಶಾಲೆ ಎನ್ನುವುದಕ್ಕೆ ಈ ಸಂಕಲನದ ಕಥೆಗಳು ಉದಾಹರಣೆಗಳಂತಿವೆ. ಮಂಜಯ್ಯನವರ ಪಾಲಿಗೆ ಕಥೆ ಹೇಳುವುದು, ತನ್ನ ಸುತ್ತಲಿನ ಪರಿಸರ ಮತ್ತು ವಿದ್ಯಮಾನಗಳಿಗೆ ಸಹೃದಯನೊಬ್ಬನ ಸೃಜನಶೀಲ ಸ್ಪಂದನವಷ್ಟೇ ಆಗಿಲ್ಲ; ಕಥೆಗಾರನ ಮಟ್ಟಿಗೆ ಲೋಕಗ್ರಹಿಕೆ ಮತ್ತು ಕಲಿಕೆಯ ವಿಧಾನವೂ ಆಗಿದೆ. ಆ ಕಾರಣದಿಂದಲೇ ಇಲ್ಲಿನ ಕಥೆಗಳು ಬೌದ್ಧಿಕ ಕಸರತ್ತಿನಿಂದ ತಪ್ಪಿಸಿಕೊಂಡ, ಸಹಜ ಸೌಂದರ್ಯವನ್ನೊಳಗೊಂಡ ರಚನೆಗಳಂತೆ ಕಾಣಿಸುತ್ತವೆ.

ಗ್ರಾಮೀಣ ಜೀವನದ ದಂದುಗಗಳನ್ನು ಚಿತ್ರಿಸುವ ಈ ಕಥೆಗಳ ಆಳದಲ್ಲಿ ವಿಷಾದ ಹೆಪ್ಪುಗಟ್ಟಿದೆ. ‘ಮುತ್ತಿನ ರಾಶಿ’, ‘ಅಗಸಿ ಹೆಣ’, ‘ಲೆಕ್ಕ ಪುಸ್ತಕ’, ‘ದೇವರ ಹೊಲ’ ಕಥೆಗಳು ಗ್ರಾಮೀಣ ಬದುಕಿನ ತವಕ ತಲ್ಲಣಗಳನ್ನು ಚಿತ್ರಿಸುವಂತೆಯೇ, ಆ ಬದುಕಿನಲ್ಲಿ ವರ್ತಮಾನದ ರಾಜಕಾರಣ ಮೂಡಿಸಿರುವ ಚಹರೆಗಳ ಚಿತ್ರಣಗಳೂ ಆಗಿವೆ. ಮಂಜಯ್ಯನವರ ಕಥೆಗಳು ಸಮಷ್ಟಿಯ ಕಥೆಗಳನ್ನು ಶೋಧಿಸುವಾಗಲೂ, ಆ ಪ್ರಯತ್ನಗಳು ವೈಯಕ್ತಿಕ ಸಂಕಟಗಳ ಶೋಧವೂ ಆಗಿ ಪರಿಣಮಿಸುವುದು ಕುತೂಹಲಕರ.

**ಲೇ: ಮಂಜಯ್ಯ ದೇವರಮನಿ; ಪು: 112; ಬೆ: ₹ 150; ಪ್ರ: ಸುದೀಕ್ಷ ಸಾಹಿತ್ಯ ಪ್ರಕಾಶನ; ಫೋನ್: 9986348931.**